ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಚುನಾವಣೆ ಮಾಹಿತಿ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE 24/10/20

### ಕೋರ್ಟ್ ಆದೇಶ ಪಾಲಿಸಲು ಕೈ ಆಗ್ರಹ

# ಅಭ್ಯರ್ಥಿ ಮುನಿರತ್ನ ವಿರುದ್ಧ ಎಫ್ಐಆರ್‌ಗೆ ಸೂಚನೆ

■ **ವಿಕ ಸುದ್ದಿಲೋಕ** ಬೆಂಗಳೂರು

ಆರ್.ಆರ್.ನಗರ ಬಿಜೆಪಿ ಅಭ್ಯರ್ಥಿ ಮುನಿರತ್ನ ವಿರುದ್ಧ ಎಫ್ಐಆರ್ ದಾಖಲಿಸಬೇಕೆಂದು ಕೋರ್ಟ್ ಸೂಚನೆ ನೀಡಿದ್ದು ತಕ್ಷಣವೇ ಎಫ್ಐಆರ್ ದಾಖಲಿಸಬೇಕೆಂದು ಕಾಂಗ್ರೆಸ್ ಆಗ್ರಹಿಸಿದೆ.

ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹಮದ್, ಮಾಜಿ ಸಂಸದರಾದ ಧ್ರುವನಾರಾಯಣ, ವಿ.ಎಸ್.ಉಗ್ರಪ್ಪ, ಮಾಜಿ ಸಚಿವರಾದ ಎಚ್.ಎಂ.ರೇವಣ್ಣ, ಪ್ರಿಯಾಂಕ ಖರ್ಗೆ ಹಾಗೂ ಕೆಪಿಸಿಸಿ ಕಾನೂನು ಘಟಕದ ಅಧ್ಯಕ್ಷ ಪೊನ್ನಣ್ಣ ಅವರು ಜಂಟಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, "ಮುನಿರತ್ನ ಹಾಗೂ ಅವರ ಬೆಂಬಲಿಗರು ಚುನಾವಣಾ ಅಕ್ರಮಗಳನ್ನು ಮಾಡುತ್ತಿದ್ದಾರೆ ಎಂದು ಇದೇ 20ರಂದು ಆಯೋಗಕ್ಕೆ ದೂರು ಸಲ್ಲಿಸಿದ್ದೆವು. ಆಯೋಗ ಮತ್ತು ಕೋರ್ಟ್ ಸೂಚನೆ ನೀಡಿದರೂ ಪೊಲೀಸರು ಎಫ್ಐಆರ್ ದಾಖಲಿಸಿರಲಿಲ್ಲ," ಎಂದು ಆರೋಪಿಸಿದರು.

ಎಚ್.ಎಂ.ರೇವಣ್ಣ, "ಮುನಿರತ್ನ ಕಂಟ್ರಾಕ್ಟರ್ ದಾಖಲೆಗಳನ್ನೇ ಹೊತ್ತೊಯ್ದವರು, ಅವರು 1800 ಕೇಸ್‌ಗಳನ್ನು ಹಾಕಿಸಿದ್ದಾರೆ. ಧ್ರುವನಾರಾಯಣ ಮೇಲೆ ಸೋಲಿನ ಹತಾಶೆಯಿಂದ ಹಲ್ಲೆನಡೆಸಿದ್ದಾರೆ. ಕೇಸ್ ದಾಖಲಿಸಲು ಅವರಿಗೊಂದು, ನಮಗೊಂದು ನ್ಯಾಯವೇ? ಪೊಲೀಸರು ಘಟನೆ ಬಗ್ಗೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ, ನಮ್ಮವರನ್ನೇ ಅಲ್ಲಿಂದ ವಾಪಸ್ ಕಳುಹಿಸಿ ಸರಕಾರದ ಕೈಗೊಂಬೆಯಾಗಿದ್ದಾರೆ," ಎಂದು ಆರೋಪಿಸಿದರು.

ವಿ. ಎಸ್.ಉಗ್ರಪ್ಪ, "ಆಪರೇಷನ್ ಕಮಲಕ್ಕೆ ಮಾರಿಕೊಂಡ ಮುನಿರತ್ನ ಆ ಹಣವನ್ನು ಚುನಾವಣಾ ಅಕ್ರಮಗಳಿಗೆ ಬಳಸುತ್ತಿದ್ದಾರೆ. ತಮ್ಮ ಹಳೆಯ ಪ್ರವೃತ್ತಿಯನ್ನೇ ಈಗಲೂ ಅವರು ಮುಂದುವರಿಸಿದ್ದಾರೆ," ಎಂದು ದೂರಿದರು.

● ಧ್ರುವನಾರಾಯಣ, ನಾರಾಯಣಸ್ವಾಮಿ ಆಮಿಷ ಒಡ್ಡುತ್ತಿದ್ದಾರೆಂದು ಮುನಿರತ್ನ ಹೇಳಿದ್ದಾರೆ. ಆದರೆ ಮುನಿರತ್ನರ ಚುನಾವಣೆ ಅಕ್ರಮಗಳ ಬಗ್ಗೆ ಆಗಿನ ಬಿಜೆಪಿ ಅಭ್ಯರ್ಥಿ ತುಳಸಿ ಮುನಿರಾಜುಗೌಡ ಕೇಸ್ ಹಾಕಿದ್ದಾರೆ. ಮುನಿರತ್ನಗೆ ನನ್ನ ಹೆಸರು ಹೇಳುವ ನೈತಿಕತೆ ಇಲ್ಲ.

**-ಧ್ರುವನಾರಾಯಣ**
ಮಾಜಿ ಸಂಸದ

● **ಆಯೋಗದ ಮೇಲೆ ಮುನಿರತ್ನಗೆ ನಂಬಿಕೆ ಇಲ್ಲವೇ? ಪಾರದರ್ಶಕ ಚುನಾವಣೆಗೆ ಕಾಂಗ್ರೆಸ್ ಕೂಡ ಮನವಿ ಮಾಡಿದೆ. ಹೊರಗಡೆಯಿಂದ ಬಂದು ಯಾರು ಪ್ರಚಾರ ಮಾಡಬಾರದೇ? ಬೇರೆ ರಾಜ್ಯದಿಂದ ಬಂದು ಆರ್‌ಎಸ್ ಎಸ್‌ನವರು ಪ್ರಚಾರ ಮಾಡುತ್ತಿಲ್ವಾ?**

**-ಪ್ರಿಯಾಂಕ ಖರ್ಗೆ** ಮಾಜಿ ಸಚಿವ